ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂ.ಎ7./ಎಸ್ ಎಸ್ ಎಲ್ ಸಿ/ಡಿಡಿಪಿಐ/ಸಭೆ /37/2018-19 ದಿನಾಂಕ-29/01/2019

ರವರಿಗೆ,

ಕಾರ್ಯದರ್ಶಿಗಳು ಹಾಗೂ
ಪದನಿಮಿತ್ತ ಸಹ ನಿರ್ದೇಶಕರು
ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ
ಸಾರ್ವಜನಿಕ ಶಿಕ್ಷಣ ಇಲಾಖೆ,
**ಬೆಳಗಾವಿ ವಿಭಾಗ, ಬೆಳಗಾವಿ**

ಮಾನ್ಯರೇ,

ವಿಷಯ : ಏಪ್ರಿಲ್-2019 ರ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ನಡೆಸಲು ಕೈಗೊಂಡಿರುವ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಲು ಬೆಳಗಾಂ ವಿಭಾಗದ ಉಪನಿರ್ದೇಶಕರು(ಆಡಳಿತ), ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳ ಸಭೆಗೆ ಹಾಜರಾಗುವ ಬಗ್ಗೆ.

*****

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವಿವಿಧ ಚಟುವಟಿಕೆಗಳನ್ನು ಗಣಕೀಕರಣಗೊಳಿಸುವ ನಿಟ್ಟಿನಲ್ಲಿ ಏಪ್ರಿಲ್-2019ರ ಪರೀಕ್ಷೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ನೋಂದಣಿ, ಮೌಲ್ಯಮಾಪನದ ಕಾರ್ಯಕ್ಕೆ ಶಿಕ್ಷಕರ ಮಾಹಿತಿ ಅಪ್‌ಲೋಡ್ ಹಾಗೂ ವಿದ್ಯಾರ್ಥಿಗಳ ತಾತ್ಕಾಲಿಕ ಪ್ರವೇಶ ಪತ್ರಗಳ ಡೌನ್‌ಲೋಡ್ ಕಾರ್ಯಗಳನ್ನು ಈಗಾಗಲೇ ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು, ರಾಜ್ಯದ ಎಲ್ಲಾ ಮೌಲ್ಯಮಾಪನ ಕೇಂದ್ರಗಳಿಂದ ಆನ್‌ಲೈನ್ ಮಾರ್ಕ್ಸ್ ಪೋರ್ಟಿಂಗ್ ಮತ್ತು ವಿಭಾಗೀಯ ಕಛೇರಿಗಳಲ್ಲಿ ಕೈಗೊಳ್ಳುವ ಅಂಕಪಟ್ಟಿ ತಿದ್ದುಪಡಿಗಳನ್ನು ಕೆ.ಎಸ್.ಇ.ಇ.ಬಿ ಕೇಂದ್ರ ಸರ್ವರ್‌ನಲ್ಲೂ ಅಪ್‌ಡೇಟ್ ಮಾಡುವ ಯೋಜನೆಗಳನ್ನು ಏಪ್ರಿಲ್-2019ನೇ ಪರೀಕ್ಷೆಗೆ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ ಎಲ್ಲಾ ಪರೀಕ್ಷಾ ಕಾರ್ಯಗಳ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಲು **ದಿನಾಂಕ: 01.02.2019 ರಂದು ಬೆಳಗ್ಗೆ 10.30 ಗಂಟೆಗೆ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಘಂಟಿಕೇರಿ, ಹುಬ್ಬಳ್ಳಿಯಲ್ಲಿ** ಸಭೆಯನ್ನು ಆಯೋಜಿಸಲಾಗಿರುತ್ತದೆ. ಬೆಳಗಾಂ ವಿಭಾಗದ ಎಲ್ಲಾ ಉಪನಿರ್ದೇಶಕರು(ಆಡಳಿತ), ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು ಈ ಸಭೆಗೆ ಹಾಜರಾಗುವಂತೆ ಸೂಚನೆಯನ್ನು ನೀಡಲು ಹಾಗೂ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

ವಂದನೆಗಳೊಂದಿಗೆ

ತಮ್ಮ ನಂಬುಗೆಯ,

29/1/19

(ಸುಮಂಗಲ.ವಿ)
ನಿರ್ದೇಶಕರು, ಪರೀಕ್ಷೆಗಳು

ಅಗತ್ಯ ಕ್ರಮಕ್ಕಾಗಿ:

1. ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಸಭೆಯ ಆಯೋಜನೆಗೆ ಕ್ರಮವಹಿಸಲು ಸೂಚಿಸಿದೆ (ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಆಯೋಜನಾ ವೆಚ್ಚವನ್ನು ಭರಿಸಲಾಗುವುದು)
2. ಹಾವೇರಿ, ಧಾರವಾಡ, ಗದಗ, ಚಿಕ್ಕೋಡಿ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಕಾರವಾರ ಮತ್ತು ಶಿರಸಿ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಕ್ಷೇತ್ರಶಿಕ್ಷಣಾಧಿಕಾರಿಗಳು, ರವರಿಗೆ ಸಭೆಗೆ ಮಾಹಿತಿಯೊಂದಿಗೆ ಹಾಜರಾಗಲು ಸೂಚಿಸಿದೆ.
3. ಲೆಕ್ಕಾಧಿಕಾರಿಗಳು ಕ ಪ್ರೌ ಶಿ ಪ ಮಂಡಳಿ ಬೆಂಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ
4. ಆಪ್ತ ಶಾಖೆಗೆ ಮಾಹಿತಿಗಾಗಿ